ಎಂದು ಸಿಟ್ಟಿನಿಂದ ಶಾಂತಪ್ಪನನ್ನು ನೋಡಿ ಹೇಳಿದ. 'ನಮ್ಮ ಕರ್ಮ, ನಮ್ಮ ನಸೀಬ ಸರಿಯಿಲ್ಲ' ಎಂದು ಸಲ್ಲೆ ಮುಖಕ್ಕೆ ಒತ್ತಿಕೊಂಡ.

'ನಾಳೆ ಬರ್ತೀನಿ. ಕುಂತು ಮಾತಾಡನು? ಎಲ್ಲದಕ್ಕೂ ದಾರಿಗಳಿರ್ತವ' ಎಂದು ಚಂದ್ರಕಾಂತಯ್ಯ ಹೊರಬಂದು ಮಠದ ಕಡೆ ನಡೆದ.

ಇನ್ನೇನು ಮಠದಲ್ಲಿ ಸಭೆ ನಡಿಬೇಕಾದ ಹೊತ್ತು ಸಮೀಪಿಸಿತೆಂದು ಚಂದ್ರಕಾಂತಯ್ಯ ನಡೆದಿದ್ದ. ದಾರಿಯಲ್ಲಿ ಪರಿಚಿತರು ಮಾತಾಡಿಸುತ್ತಿದ್ದರು. ಎಲ್ಲ ಮಠಾಧೀಶರು ಏನು ಮಾಡಬಹುದು ಎಂಬುದನ್ನು ಚಂದ್ರಕಾಂತಯ್ಯ ಕಲ್ಪಿಸಿಕೊಳ್ಳುತ್ತಿದ್ದ. ಊರಲ್ಲೇ ನಡೆದು ಹೋದ ದುರಂತ ತಡೆಯುವ ಇಚ್ಛಾಶಕ್ತಿ ಇಲ್ಲದ ಹುಸಿ ವ್ಯಕ್ತಿಗಳಿವರು ಎಂದುಕೊಂಡ.

ಆರು ತಿಂಗಳಾಯ್ತು. ಹೂಗಾರ ಶಿವಕುಮಾರಪ್ಪ, ತನ್ನಿಬ್ಬರು ಮಕ್ಕಳ ಜತೆ ಸೇರಿ ಹೆತ್ತ ಮಗಳನ್ನೇ ಕೊಂದು ಅಪರಾಧಿಗಳಾಗಿ ಜೈಲು ಸೇರಿದ್ದರು. ಮಗಳು ಶಿವಗೀತಾ ತಾಲ್ಲೂಕು ಕೇಂದ್ರದ ಕಾಲೇಜಿಗೆ ನಿತ್ಯ ಊರಿಂದ ಹೋಗಿ ಬರ್ತಿದ್ದಳು. ಇದೇ ಊರಿನ ಕೇರಿಯ ಸಿದ್ದಪ್ಪನ ಮಗ ಬಸವರಾಜು ಪದವಿ ಮುಗಿಸಿ ತಾಲ್ಲೂಕಿನಲ್ಲಿ ನೌಕರಿ ಮಾಡುತ್ತಿದ್ದನು. ಅವರಿಬ್ಬರು ಆಕರ್ಷಿತರಾಗಿ ಮದುವೆಗೆ ಸಿದ್ಧರಾದರು. ಆದರೂ ಊರು-ಕೇರಿಯ ಬಗ್ಗೆ ಇಬ್ಬರು ಸೂಕ್ಷ್ಮರಾಗಿಯೇ ಸ್ನೇಹ ಬೆಳೆಸಿಕೊಂಡಿದ್ದರು. ಶಿವಗೀತಾ ಮತ್ತು ಬಸವರಾಜ ಇಬ್ಬರಿಗೂ ಮದುವೆ ಸುಲಭದ್ದಾಗಿರಲಿಲ್ಲ. ಪ್ರತ್ಯೇಕ ಪ್ರತ್ಯೇಕವಾಗಿ ಚಂದ್ರಕಾಂತಯ್ಯನನ್ನು ಕಂಡು ಮದುವೆ ಬಗ್ಗೆ ಚರ್ಚಿಸಿದ್ದರು. 'ವೈಯಕ್ತಿಕವಾಗಿ ನಿಮ್ಮ ಮದುವೆಗೆ ನನ್ನ ಬೆಂಬಲವಿದೆ. ಬಹಿರಂಗವಾಗಿ ಪ್ರೋತ್ಸಾಹ ಕೊಡಲು ಅಡ್ಡಿಗಳಿವೆ. ನಿಮ್ಮನಿಮ್ಮ ಹೆತ್ತವರನ್ನು ಮೊದಲು ಒಪ್ಪಿಸಿರಿ. ಅವರ ಒಪ್ಪಿಗೆ ಸಿಕ್ಕರೆ ಊರು-ಕೇರಿಗೆ ಅಂಜುವುದು ಬ್ಯಾಡ. ಅದು ನಾಕು ದಿನ ಮಾತಾಡಿಕೊಂಡು ಮರತು ಬುಡ್ತದ' ಎಂದು ಹೇಳಿ ಕಳಿಸಿದ್ದ. ಶಿವಗೀತಾಳ ಅಪ್ಪ ಅಪ್ಪಟ ಜಾತಿವಾದಿ ಅಂಬೋದು ಚಂದ್ರಕಾಂತಯ್ಯನಿಗೆ ತಿಳಿದಿತ್ತು. ಮಗಳು ಇನ್ನೂ ಚೆನ್ನಾಗಿ ಅರಿತಿದ್ದಳು. ತಾಯಿ ಮುಂದೆ ಚರ್ಚೆ ಮಾಡಿ ಸೋತಿದ್ದಳು. ಆದರೆ ಮದುವೆ ವಯಸ್ಸು ನಮ್ಮದು. ಕಾನೂನಿನ ಬೆಂಬಲ ಐತೆ. ಪೊಲೀಸರ ರಕ್ಷಣೆ ಪಡಿತಿವಿ ಎಂದು ಮಾತಾಡಿದ್ದರು ಅವರಿಬ್ಬರು. ಬಸವರಾಜನಿಗೆ ತಂದೆ- ತಾಯಿಗಳ ಒಪ್ಪಿಗೆ ಇರಲಿ, ಜಾತಿ ಸಂಘಟನೆಗಳೇ ವಿರೋಧಿಸಿದ್ದವು. ಕೇರಿಯ ಒಂದು ಹೆಣ್ಣಿಗೆ ಬಾಳ್ವೆ ಕೊಡಬೇಕೇ ಹೊರತು ಊರಿನ ಹೆಣ್ಣಿಗಲ್ಲ ಎಂದು ನಾಗರಾಜನಿಗೆ ತಿಳಿಸಿದ್ದವು. ಆದರೂ ಶಿವಗೀತಾ-ಬಸವರಾಜ ಜಿಲ್ಲಾ ಕೇಂದ್ರದ ನೋಂದಣಿ ಕಚೇರಿಯಲ್ಲಿ ಮದುವೆಯನ್ನು ಕಾನೂನಿನ ಅಡಿಯಲ್ಲಿ ಮಾಡಿಕೊಂಡರು. ಪತ್ರಿಕೆಯಲ್ಲಿ ದೊಡ್ಡ ಸುದ್ದಿಗಳಾದವು. ಪ್ರಶಂಸಿಸಿಯೇ ಬರೆದಿದ್ದವು. ಶಿವಕುಮಾರಪ್ಪನನ್ನು ಮಠದ ಸಣ್ಣವರು ಕರೆದು 'ಎಚ್ಚರ ತಪ್ಪಿದ್ದೇನು? ಮದುವೆ ಆಗುವವರೆಗೆ ಸುಮ್ಮನಿದ್ದುದು ಯಾಕೆ?' ಎಂದು ಪ್ರಶ್ನಿಸಿದರೆಂದು ಶಿವರುದ್ರಯ್ಯ, ಚಂದ್ರಕಾಂತಯ್ಯನಿಗೆ ತಿಳಿಸಿದ್ದ. ಶಿವಕುಮಾರಪ್ಪನ ಬೀಗರುಗಳು 'ಕೇರಿ ಹುಡುಗನ ಜತೆ ಮದುವೆ ಆಗುವುದನ್ನು ತಡಿಬೇಕಾಗಿತ್ತು' ಎಂದು ದೂರ ಸರಿದರು. ಇದರಿಂದ ಶಿವಕುಮಾರಪ್ಪ, ತನ್ನ ಇಬ್ಬರು ಗಂಡು ಮಕ್ಕಳ ಜತೆ ಕೆಟ್ಟದ್ದಾಗಿ ಯೋಚಿಸುತ್ತಿದ್ದನಂತೆ. ಆದರೂ ಚಂದ್ರಕಾಂತಯ್ಯ ಕಂಡು 'ಆದದ್ದು ಆಗಿ ಹೋಗ್ಯಾದ. ಅದರ ಬಗ್ಗೆ ಜಾಸ್ತಿ ಚಿಂತೆ ಮಾಡಬ್ಯಾಡ. ದಿನ ಕಳದಂಗ ಎಲ್ಲರೂ ಮರೆತು ಬಿಡ್ತಾರ' ಎಂದು ತಾಳ್ಮೆಯಿಂದ ಹೇಳಿ ಬಂದಿದ್ದ. ಶಿವಕುಮಾರಪ್ಪ ಮಾತ್ರ ಬೂದಿ ಮುಚ್ಚಿದ ಕೆಂಡಂತಿದ್ದ. ಮಗಳು ಶಿವಗೀತಾ ಆರು ತಿಂಗಳಿಂದ ಮನೆ ಕಡೆ ಬರುವ ದಾರಿಯೇ ಇರಲಿಲ್ಲ. ಮೂರು ತಿಂಗಳ ಬಸುರಿ ಎಂಬ ಸುದ್ದಿ ಕೇಳಿ 'ಬುತ್ತಿ ಮಾಡ್ತೀವಿ (ಸೀಮಂತ) ಎಂದು ನೆಪ ಮುಂದೆ ಮಾಡಿ ಮಗಳನ್ನು ಕರೆಸಿ, ಯಾವುದೋ ದೇವರಿಗೆ ಪೂಜೆ ಸಲ್ಲಿಸಲು ಕರೆದೊಯ್ದು ತಂದೆ ಮಕ್ಕಳಿಬ್ಬರು ಕೊಲೆ ಮಾಡಿಬಿಟ್ಟಿದ್ದರು. ಪೊಲೀಸರಿಗೆ ದೇವರ ಗುಡಿಯವರೆ ತಿಳಿಸಿದರು. ಆ ರಾತ್ರಿಯೇ ಬಂಧಿಸಿ ಕರೆದೊಯ್ದರು. ಊರು-ಕೇರಿ ತತ್ತರಿಸಿತು. ನಿಂತಲ್ಲಿ ಕುಂತಲ್ಲಿ, ಉಂಡಲ್ಲಿ, ಮಲಗಿದಲ್ಲಿ ಶಿವಗೀತಾಳ ಚರ್ಚೆಯೇ ನಡೆಯುತ್ತಿತ್ತು. ಬಸವರಾಜ ಶಿವಗೀತಾಳನ್ನು ತವರು ಮನೆಯವರು ಕರೆದೊಯ್ದ ಬಗ್ಗೆ ಸಾಕ್ಷಿ ಹೇಳಿದ...

ಮಠ ಪ್ರವೇಶಿಸಿದ. ಆಗಲೇ ಜನ ಸೇರಿದ್ದರು. ಅದೇನೂ ಸಭೆಯಾಗಿರಲಿಲ್ಲ. ಸಾರ್ವಜನಿಕರು ಬಹಳವಿದ್ದರು. ಚಂದ್ರಕಾಂತಯ್ಯ ಹಿಂದುಗಡೆ ಸದ್ದಿಲದೆ ಕುಂತು ಆಲಿಸತೊಡಗಿದ. ಏಳೆಂಟು